ಶ್ರೀ ವಿ. ಮಾಸಿಯಪ್ಪ.—ಜಿಲ್ಲಾ ಬೋರ್ಡುಗಳಿಗೆ ಕೊಟ್ಟಿರುವಂತೆ ಪಾರ್ಷಿಯಲ್ ಮೊಬಲಗನ್ನು ಈಗ ತಾವು ಗ್ರಾಮ ಪಂಚಾಯಿತಿಗಳಿಗೂ ಕೊಟ್ಟಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಕೊಟ್ಟಿಲ್ಲ.

ಶ್ರೀ ವಿ. ಮಾಸಿಯಪ್ಪ.—ಕಾರಣವೇನು ಸ್ವಾಮಿ?

ಶ್ರೀ ಟಿ. ಚನ್ನಯ್ಯ.—ಅಕೌಂಟ್ಸ್ ಇನ್ನೂ ತೀರ್ಮಾನವಾಗಿಲ್ಲ. ಆದನಂತರ ಕೊಡಲಾಗುತ್ತದೆ.

"Monday Work" in the Villages.

Q.—281. **Sri K. V. BYRE GOWDA** (Bangalore North).—

Will the Government be pleased to state.—

(*a*) Whether it has come to their notice that the "Monday Work" (ಸೋಮವಾರದ ಕೆಲಸ) in villages is not regular;

(*b*) the measures taken by them to regulate such works like village road formation, tank bund repairs, etc.;

(*c*) the instructions to the Amildars and Revenue Inspectors to enforce and accelerate such works?

A.—**Sri T. CHANNIAH** (Minister for Public Health and Local Self-Government).—

(*a*) No.

(*b*) and (*c*) section 35 (1) of the Mysore Irrigation Act provides for the performance of the customary labour in regard to the tank bund repairs, etc., and also the levy of contribution in lieu of labour. Circular instructions have been issued by the Revenue Commissioner regarding the importance of the system of Weekly labour (*vide* Page 74 of the Manual) and its enforcement.

ಶ್ರೀ ಕೆ. ಎ. ಬೈರೇಗೌಡ.—ಹಾಗೆ ಸೋಮವಾರದ ಕೆಲಸ ಮಾಡಬೆ ಇರತಕ್ಕ ಗ್ರಾಮಗಳಲ್ಲಿ ಕಾಂಟ್ರಿಬ್ಯೂಷನ್ ಮೊಬಲಗನ್ನು ಅವರು ಕೊಡುವಂತೆ ವಿಧಾಯಕ ಮಾಡಿದರೆ, ಆರ್ಥಿಕ ದುಸ್ಥಿತಿಯಲ್ಲಿರತಕ್ಕ ರೈತರ ಮೇಲೆ ಹೆಚ್ಚಿಗೆ ಹಣದ ಭಾರ ಬೀಳುವುದಿಲ್ಲವೇ?

Sri T. CHANNIAH.—The information is not available Sir.

Introduction of Prohibition in the other Districts of the State.

Q.—383. **Sri H. T. PUTTAPPA**, (Hoskote-Anekal-Scheduled Castes)—

Will the Government be pleased to state.—

The date from which prohibition will be introduced in the other districts of the State?

A.—**Sri T. CHANNIAH** (Minister for Public Health and Local Self-Government).—

It is not possible to fix the date at present.

ಶ್ರೀ ಎಚ್. ಟಿ. ಪುಟ್ಟಪ್ಪ.—ಸಂಸ್ಥಾನದಲ್ಲಿ ಪಾನ ನಿರೋಧವನ್ನು ಜಾರಿಗೆ ತಾರದಿರುವ ಜಿಲ್ಲೆಗಳಲ್ಲಿ ಜಾರಿಗೆ ತರಬೇಕೆಂಬ ಉದ್ದೇಶ ಸರ್ಕಾರದವರಿಗೆ ಇದೆಯೇ?

ಅಧ್ಯಕ್ಷರು.—ತಮ್ಮ ಪ್ರಶ್ನೆಯೇ ಅದು. ಆ ಪ್ರಶ್ನೆಗೆ ಸಂಬಂಧಪಟ್ಟ ಉಪಪ್ರಶ್ನೆಗಳೇನಾದರೂ ಇದ್ದರೆ, ಅವುಗಳನ್ನು ತಾವು ಕೇಳಿ.

ಶ್ರೀ ಎಚ್. ಟಿ. ಪುಟ್ಟಪ್ಪ.—ಅದೇ ನಾನು ಕೇಳಬೇಕೆಂದಿರುವ ಪ್ರಶ್ನೆ. ಸರ್ಕಾರದವರಿಗೆ ಹಾಗೆ ಪಾನನಿರೋಧವನ್ನು ಜಾರಿಗೆ ತಂದಿಲ್ಲದ ಕಡೆ ತರಬೇಕೆಂಬ ಉದ್ದೇಶವಿದೆಯೇ?

Sri K. HANUMANTHAIYA.—(Chief Minister)—May I answer this question Sir? I understand that the Government of India is likely to appoint a Committee to review the whole question in India. Therefore anything that the Minister says would to that extent be an interim answer. Therefore it is very difficult at this stage to give definite answers to the supplementary questions, Sir.

Sri K. PUTTASWAMY.—Is it a Central Subject or a State Subject?

Sri K. HANUMANTHAIYA.—It is a State Subject.

Sri K. PUTTASWAMY.—Then, should we wait for the report of the Committee that the Central Government is likely to appoint?

Sri K. HANUMANTHAIYA.—It is merely for the purposes of co-ordination of work throughout India. As the Hon'ble Member is aware, although Prohibition is not a Central Subject, it spreads throughout the length and breadth of the country. Uniform introduction would therefore be a sound proposition.

Nationalisation of Bus Routes.

Q.—125. **Sri G. NARAYANA GOWDA** (Mulbagal-Srinivaspur).—Will the Government be pleased to state:—

(*a*) whether they have contemplated taking some of the bus routes as a

monopoly measure in the Nationalisation Scheme;

(*b*) if so, the names of those routes?

A.—**Sri H. SIDDAVEERAPPA** (Minister for Home Affairs and Agriculture).—

(*a*) Yes.

(*b*) (1) Bangalore-Mysore-Gundlupet.
(2) Bangalore-Kolar-Kolar Gold Fields.
(3) Bangalore-Tumkur.
(4) Bangalore-Kunigal-Belur.
(5) Bangalore-Dodballapur.
(6) Bangalore-Devanahalli.

ಶ್ರೀ ಜಿ. ನಾರಾಯಣಗೌಡ—ಈ ಆರು ರೈನು ಗಳ ಮನಾಪಲು ಸ್ಕೀಮನ್ನು ಆಕ್ಟೋಬರ್ ತಿಂಗಳಿ ನಿಂದಲೇ ಜಾರಿಗೆ ತರಬೇಕೆಂದು ನಿರ್ಧರ ಮಾಡಿತ್ತ ಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಜಿ. ನಾರಾಯಣಗೌಡ.—ಹಾಗಿದ್ದ ಪಕ್ಷದಲ್ಲಿ ಜಾರಿಗೆ ತಾರದೆ ಏಕೆ ನಿಲ್ಲಿಸಿದಿರಿ?

ಶ್ರೀ ಎಚ್. ಸಿದ್ದವೀರಪ್ಪ.—ಈ ಆರು ರೈನು ಗಳಲ್ಲಿ ಬಸ್ಸುಗಳನ್ನು ನಡೆಸುತ್ತಿದ್ದ ಮಾಲೀಕರು ನಮಗೆ ಅನುಕೂಲ ಕಂಡು ಬರುವ ರೂಪುಗಳನ್ನು ನಾವಿನ್ನೂ ತೀರ್ಮಾನ ಮಾಡಿಕ್ಕೊಂಡಿಲ್ಲ ನಮಗೆ ತಾವು ಇನ್ನೂ ಕೊಂಚ ಕಾಲಾವಕಾಶ ಕೊಡಬೇಕು ಎಂದು ಕೇಳಿ ಕೊಂಡ ಕಾರಣ ಈ ಕಾರ್ಯಕ್ರಮವನ್ನು ಮೂರು ತಿಂಗಳ ಕಾಲ ಮುಂದಕ್ಕೆ ಹಾಕರಾಗಿದೆ.

ಶ್ರೀ ಜಿ. ನಾರಾಯಣಗೌಡ.—ಈ ಆರು ರೈನು ಗಳಲ್ಲೂ ಎಷ್ಟು ಖಾಸಗೀ ಬಸ್ಸುಗಳು ಓಡುತ್ತಿವೆ?

ಶ್ರೀ ಎಚ್. ಸಿದ್ದವೀರಪ್ಪ.—ಈ 6 ರೂಟ ನಲ್ಲೂ ಒಟ್ಟು 203 ಬಸ್ಸುಗಳು ಓಡುತ್ತಿವೆ. ಈ ಪೈಕಿ 1-5 ಮೈಲಿ ಕೂಡ ಓಡತಕ್ಕವುಗಳಿವೆ. ಆ ಬಗ್ಗೆ ನನ್ನಲ್ಲಿ ಹಾಲ ತಪಶೀಲು ಅಂಕಿ ಅಂಶಗಳಿಲ್ಲ. ಅವು ಗಳೆರ್ಲಾ ಬೇರೆ ಕಾಗದದಲ್ಲಿರುತ್ತವೆ.

ಶ್ರೀ ಜಿ. ನಾರಾಯಣಗೌಡರು.—ತಾವು ಇವರು ಗಳಿಗೆರ್ಲಾ ಮುಂಚಿತವಾಗಿಯೇ ನೋಟೀಸ್ ಕೊಟ್ಟಿರ ಲಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಸಾಮಾನ್ಯ ರೀತಿಯಲ್ಲಿ ಎಲ್ಲರಿಗೂ ಕೊಡರಾಗಿತ್ತು.

ಶ್ರೀ ಜಿ. ನಾರಾಯಣಗೌಡ—ಹಾಗೆ ಕೊಟ್ಟ ಮೇಲೂ ಈ ರೀತಿ ಮಾಡುವುದು ಸರಿಯೇ?

Sri H. SIDDAVEERAPPA.—That is a matter of opinion.

ಶ್ರೀ ಮುರ್ಕಾ ಗೋವಿಂದರೆಡ್ಡಿ (ಚಿತ್ರ ದುರ್ಗ).—ಈ ರೈನುಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಸರ್ಕಾರ ನಿರ್ಧೈಸಿದ್ದು ಯಾವಾಗ?

ಶ್ರೀ ಎಚ್. ಸಿದ್ದವೀರಪ್ಪ.—ಸೆಪ್ಟಂಬರ್ 5ನೆಯ ತಾರೀಖಿನಲ್ಲಿ.

ಶ್ರೀ ಮುರ್ಕಾ ಗೋವಿಂದರೆಡ್ಡಿ.—ಹಾಗೆ ತಾವು ತೀರ್ಮಾನ ಮಾಡುವ ಕಾಲಕ್ಕೆ ಮುಂಚಿತ ವಾಗಿಯೇ ಆ ಬಸ್ ಮಾಲೀಕರುಗಳಿಗೆರ್ಲಾ ನೋಟೀಸ್ ಕೊಟ್ಟು ತಿಳಿಸರಾಗಿತ್ತೆ?

ಶ್ರೀ ಎಚ್. ಸಿದ್ದವೀರಪ್ಪ.—1948ನೆಯ ಇಸವಿಯಲ್ಲಿ ಮೊದಲು ರಾಷ್ಟ್ರೀಕರಣ ಯೋಜನೆ ಯನ್ನು ಜಾರಿಗೆ ತಂದ ಕಾಲದಲ್ಲೇ ಪ್ರತಿಯೊಬ್ಬ ಖಾಸಗೀ ಬಸ್ ಮಾಲೀಕರುಗಳಿಗೂ ಮುಂಜೂರಾಗಿರ ತಕ್ಕ ರೈನುಗಳೆಲ್ಲವೂ ಕೇವಲ ಹಂಗಾಮಿಯೆಂದೇ ಹೇಳಿ ರೈಸರ್ಜನ್ನು ಕೊಡರಾಗಿದೆ.

ಶ್ರೀ ಮುರ್ಕಾ ಗೋವಿಂದರೆಡ್ಡಿ.—ಹಾಗಿದ್ದರೂ ಕೂಡ ತಾವು ಈಗ ಏತಕ್ಕಾಗಿ ಹೀಗೆ ಡಿಸ್ಕ್ರೀಷ್ ಉಪಯೋಗಿಸಿ ಆ ರೈನುಗಳನ್ನು ಮುಂದುವರಿಸಿದಿರಿ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಮಾಡಿದರೆ ಅವರಿಗೆ ಬಹಳ ತೊಂದರೆಯಾಗುತ್ತದೆಂಬ ಭಾವನೆ ಯಿಂದ ಆ ರೀತಿ ಮಾಡಲಲ್ಲ.

ಶ್ರೀ ಮುರ್ಕಾ ಗೋವಿಂದರೆಡ್ಡಿ.—ತಾವು 1948ರಲ್ಲೇ ಈ ಬಸ್ ರಾಷ್ಟ್ರೀಕರಣ ಯೋಜನೆ ಯನ್ನು ಜಾರಿಗೆ ತರತಕ್ಕ ಕಾಲದಲ್ಲಿ ಈ ಅಂಶಗಳ ನ್ನೆಲ್ಲಾ ತಾವೇಕೆ ಆಲೋಚನೆ ಮಾಡಲಿಲ್ಲ?

ಶ್ರೀ ಎಚ್. ಸಿದ್ದವೀರಪ್ಪ.—ಆ ಪಾಲಸಿಯನ್ನು ನಾವು ಇಂದಿಗೂ ಮುಂದುವರಿಸುತ್ತಲೇ ಇದ್ದೇವೆ.

ಶ್ರೀ ಮುರ್ಕಾ ಗೋವಿಂದರೆಡ್ಡಿ.—ಹಾಗೆ ತಾವು ಮಾಡಿಕೊಂಡಿರತಕ್ಕ ತೀರ್ಮಾನಕ್ಕೆ ಇಂದು ತಾವು ಹಿಂದಕ್ಕೆ ಹೋದಂತಾಗಲಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹಿಂದಕ್ಕೆ ಹೋದಂತಾ ಗಲಲ್ಲ. ಹೀಗೆ ಮಾಡಿರತಕ್ಕದ್ದು ಕೇವಲ Humane consideration ಇಂದ.

ಶ್ರೀ ಎಂ. ರಾಜಶೇಖರಮೂರ್ತಿ (ಯಳಂದೂ ರು).—ಈಗ ನಡೆಯುತ್ತಿರುವ ಕಾರ್ಯಾಚರಣೆಗಳೆಲ್ಲವೂ ಕಾರ್ಟಿಸ್ಟ್ಯೂಷ್ಷ ಆಕ್ಟ್ ಪ್ರಕಾರವೇ ನಡೆಯು ತ್ತಿವೆಯೋ?

ಶ್ರೀ ಎಚ್. ಸಿದ್ದವೀರಪ್ಪ.—ಕಾರ್ಟಿಸ್ಟ್ಯೂಷ್ಷ ಪ್ರಕಾರವೇ ನಡೆದಿರುತ್ತವೆ.

ಶ್ರೀ ಎಂ. ರಾಜಶೇಖರಮೂರ್ತಿ.—ಹಾಗೆ ಅದು ಒಂದು ಕಾರ್ಟಿಸ್ಟ್ಯೂಷ್ಷ ಆಗಬೇಕಾಗಿದ್ದರೆ ಅದಕ್ಕೆ ರೆಪಿಸ್ಪೇಚರ್ ಸ್ಯಾಂಕ್ಷ್ಷ ಆಗತ್ಯವೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಗೊತ್ತಿದೆ. I will be obliged to my Hon'ble friend, if he brings any violation of the provision to my notice. I am only aware that I am proceeding in accordance with the Constitutional provisions.

ಶ್ರೀ ಎಂ. ರಾಜಶೇಖರಮೂರ್ತಿ.—ತಾವು ಈಗ ಪರ್ಮಿಟ್ ಗ್ರಾಂಟ್ ಮಾಡಿರುವುದು ಕಾರ್ಟಿಸ್ಟ್ಯೂಷ್ಷಗೆ ವಿರುದ್ಧವಾಗಿಲ್ಲವೆ?

ಶ್ರೀ ಹೆಚ್. ಸಿದ್ದವೀರಪ್ಪ.—ಇಲ್ಲ. I am not prepared to accept that position.

ಶ್ರೀ ಎಂ. ವಿ. ರಾಮರಾವ್ (ತುಮಕೂರು).—ಹಾಗೆ ನೋಟೀಸ್ ಕೊಟ್ಟು ತಾವು ಯಾವುದಾದರೂ ಬಸ್ ರೈನುಗಳನ್ನು ತೆಗೆದುಕೊಂಡಿದ್ದೀರಾ?

Sri H. SIDDAVEERAPPA.—Please repeat that question.

Sri M. RAJASEKHARA MURTHY.—May I ask, Sir, whether any of those roads that have been mentioned by way of answer have been actually taken over by the Government in pursuance of the Monopoly Road Transport?

Sri H. SIDDAVEEAPPA.—Sir, In those roads we are already running buses. We have got our own buses.

Sri M. RAJASEKHARA MURTHY.—May I know if any private buses are running?

Sri H. SIDDAVEERAPPA.—Not that I am aware of it.

Sri M. RAJASEKHARA MURTHY.—May I know Sir, how many private bus services would be affected, if Government monopoly is introduced along those routes?

Sri H. SIDDAVEERAPPA.—I have already given the figures; 203 buses.

Sri M. V. RAMA RAO (Tumkur).—May I know, Sir, whether Government have exempted any considerable number of these bus-owners from the operation of this Monopoly?

Sri H. SIDDAVEERAPPA.—No. The Government have not exempted them. They have been making representations with regard to 2 — 3 miles. That is a matter of detail. We have not exempted any bus owner so far.

Sri M. V. RAMA RAO.—May I know Sir, whether it is a fact that bus lines which compete with Government services are to be exempted from the operation.

Sri H. SIDDAVEERAPPA.—No decision has yet been taken, Sir.

Sri M. V. RAMA RAO.—May I know when the decision will be taken?

Sri H. SIDDAVEERAPPA.—Very soon; possibly within this month or definitely the next month.

ಶ್ರೀ ಆರ್. ಅನಂತರಾಮ್ (ಚಾವುರಾಜ ಪೇಟೆ).—ಬಸ್ ಫ್ರೊಪ್ರೈಟರುಗಳಿಂದ ಜನವರಿ ತಿಂಗಳಲ್ಲಿ ತಾವು ಅವರಿಂದ ಬರೆಸಿಕೊಂಡ ಮುಚ್ಚಳಿಕೆಗಳಲ್ಲಿ ಸರ್ಕಾರದವರು ಅವರ ಬಸ್ಸುಗಳನ್ನು ನಿಲ್ಲಿಸಿದುದಕ್ಕಾಗಿ 'ನಾವು ಸರ್ಕಾರದವರಿಂದ ಪರಿಹಾರವೇನನ್ನೂ ಕೇಳುವುದಿಲ್ಲ' ಎಂದು ಬರೆಸಿಕೊಂಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಆ ರೀತಿ ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ. ಆದರೆ ಕೆಲವರು ಮಾತ್ರ ಹಾಗೆ ಬರೆದುಕೊಟ್ಟಿದ್ದಾರೆ. ಇನ್ನು ಕೆಲವರು ತಮಗೆ ಸ್ವಲ್ಪ ಕಾಲಾವಕಾಶಕೊಡಬೇಕೆಂದು ಕೇಳಿಕೊಂಡಿದ್ದಾರೆ.

ಶ್ರೀ ಆರ್. ಅನಂತರಾಮ್.—ಬಸ್ ರಾಷ್ಟ್ರೀಕರಣ ಮಾಡಿದ ಕಾಲದಲ್ಲೇ ತಾವು ಅವರಿಂದ ಆ ರೀತಿ ಮುಚ್ಚಳಿಕೆ ಬರೆಸಿಕೊಂಡಿದ್ದರೆ, ಪುನಃ ತಾವೇಕೆ ಅವರಿಗೆ ಲೈಸೆನ್ಸು ಕೊಡಬೇಕು?

Sri H. SIDDAVEERAPPA.—Subject to that condition the licences are always renewed every quarter.

ಶ್ರೀ ಆರ್. ಅನಂತರಾಮ್.—ಹಾಗೆ ಮುಚ್ಚಳಿಕೆ ಬರೆದು ಕೊಟ್ಟಮೇಲೆ ಮತ್ತೆ ಪುನಃ ನೋಟೀಸ್ ಕೊಡಬೇಕಾದ ಆವಶ್ಯಕತೆ ಇರುವುದಿಲ್ಲವಲ್ಲವೇ?

Sri H. SIDDAVEERAPPA.—All that is to err on the safer side.

Sri M. PALANIYAPPAN. — By nationalisation of the bus routes, 203 bus owners will be affected. Will the Government provide other routes to those bus owners?

Sri H. SIDDAVEERAPPA. — The Government will be ready and willing to provide many alternative routes, if they apply and the Government do not wish to leave their cases unconsidered.

Sri M. PALANIYAPPAN.—Will they be given preference over others Sir?

Sri H. SIDDAVEERAPPA.—Certainly. Whenever they want any alternative routes, the Government will favourably consider their cases.

Sri M. PALANIYAPPAN.—Are the Government aware, Sir, that in the present Government buses no facility for carrying goods is given from one place to another?

Sri H. SIDDAVEERAPPA. — For transporting goods no facility is given in the Government buses.

Mr. SPEAKER.—That is a matter of detail.

Sri M. PALANIYAPPAN.—It is a very important fact. If the Government nationalise these routes there will not be any possibility of goods being transported from one place to another in these routes.

Mr. SPEAKER. — That is already over.

ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).— ಈಗ ತಾವು ತಿಳಿಸಿದ ಪ್ರಕಾರ ಸುಮಾರು 200 ಚಿಲ್ಲರೆ ಬಸ್ಸುಗಳವರಿಗೆ ತೊಂದರೆಯಾಗುತ್ತದೆಂದು ತಾವು ಜನವರಿ ತಿಂಗಳಿನಲ್ಲಿ ಕೆಲವು ಖಾಸಗೀ ಬಸ್ಸಿನವರಿಗೆ ಕಾಲಾವಕಾಶ ಕೊಡೋಣ ವಾಯಿತು ಎಂದು ಹೇಳಿದಿರಿ. ಆದರೆ ಹಾಗೆ ಆ 200 ಬಸ್ಸುಗಳನ್ನೂ ನಿಲ್ಲಿಸಿದಕೂಡಲೇ ಆ ಲೈನುಗಳಲ್ಲಿ ಓಡಿಸಲು ಸಾಕಷ್ಟು ಸರ್ಕಾರಿ ಬಸ್ಸುಗಳು ಈಗ ತಮ್ಮಲ್ಲಿ ಇರುತ್ತವೆಯೇನು?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. ಇಟ್ಟುಕೊಂಡಿದ್ದೇವೆ.

ಶ್ರೀ ಎಂ. ಮಾದಯ್ಯನವರು.— ಆ 200 ಚಿಲ್ಲರೆ ಬಸ್ಸುಗಳಿಗೆ ಬದಲು ಬಸ್ಸುಗಳನ್ನು ರನ್ ಮಾಡಲು ಏರ್ಪಾಡು ತಾವು ಮಾಡಿಕೊಂಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಆ ಎಲ್ಲಾ ಬಸ್ಸುಗಳೂ ನಿಂತುಹೋದರೆ ಎಷ್ಟು ಬಸ್ಸುಗಳು ಬೇಕೋ ಅಷ್ಟೂ ಈಗ ನಮ್ಮಲ್ಲಿರುತ್ತವೆ

It is not necessary to keep all the 200 buses running in these routes. Our ordinary services will be able to cope with the traffic on these routes. To meet the need of extra traffic on special occasions Government have got adequate number of buses.

ಶ್ರೀ ಎಂ. ಮಾದಯ್ಯ.—ಈಗ ತಾವು ಹೇಳಿದ ಪ್ರಕಾರ ಜನವರಿ ಒಂದನೆಯ ತಾರೀಖಿನಲ್ಲಿ ಸರ್ಕಾರದವರು ಮನಾಪಲ ಮಾಡಿಕೊಳ್ಳತಕ್ಕ ಬಗ್ಗೆ ಮುಚ್ಚಳಿಕೆ ಬರೆದುಕೊಟ್ಟು ತದನಂತರ ಹಾಗೆ ರೈನುಗಳನ್ನು ಬಿಟ್ಟುಕೊಡಲು ಒಪ್ಪದೆ ರನ್ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಎಂ. ಮಾದಯ್ಯ.—ಬೆಂಗಳೂರು ಮೈಸೂರು—ಗುಂಡ್ಲುಪೇಟೆ ರೈನಿನಲ್ಲಿ ಹಾಗೆ ಮುಚ್ಚಳಿಕೆ ಬರೆದು ಕೊಟ್ಟು ಈಗ ಅದಕ್ಕೆ ಒಪ್ಪದೆ ಬಸ್ ರನ್ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಎಂ. ಮಾದಯ್ಯ.—ಹಾಗಿದ್ದರೆ ಸಾರ್ವಜನಿಕರಿಗೆ ಸರ್ಕಾರಿ ಬಸ್ಸುಗಳು ಓಡುವ ರಸ್ತೆಗಳಲ್ಲ, ಬಸ್ಸನ್ನು ಓಡಿಸಲು ತಾವು ಅವಕಾಶ ಕೊಡುವಿರಾ?

ಶ್ರೀ ಎಚ್. ಸಿದ್ದವೀರಪ್ಪ.—ಅವಶ್ಯವಿದ್ದರೆ ಆಲೋಚನೆ ಮಾಡುತ್ತೇವೆ.

Mr. SPEAKER.—Questions 175 and 457 may be taken up together as they are of the same nature.

Q.—175. **Sri M. LINGANNA.**—(Nanjangud).—

Report of the Committee on Harvest Scheme.

Will the Government be pleased to state:—

(*a*) whethter the report of the Committee formed under the Chairmanship of the Food Minister to revise the harvest scheme is ready;

(*b*) if so, whether they will submit its report to this House ?

A.—**Sri H. SIDDAVEERAPPA** (Minister for Home Affairs and Agriculture).—

(*a*) Yes;

(*b*) No. The report of the Committee to revise procurement scheme for foodgrains is still under consideration of Government.

Mode of Acquisition of Food grains.

Q.—457. **Sri H. K. SHIVARUDRAPPA** (Gundlupet-Heggaddevankote).—

Will the Government be pleased to state:—

(*a*) the decision they have arrived at in regard to acquisition of food grains;

(*b*) whether they would give effect to that decision in connection with the ensuing acquisition operations;

(*c*) whether they would stop acquisition during this year in view of conditions of scarcity of foodgrains ?

A.—(*a*) **Sri H. SIDDAVEERAPPA** (Minister for Home Affairs and Agriculture).—

(*a*) and (*b*) The mode of acquisition of food grains to be adopted in the State is under consideration of Government.

(*c*) Not possible.

ಶ್ರೀ ಎಚ್. ಕೆ. ಶಿವರುದ್ರಪ್ಪ.—ನನ್ನ (ಎ) ಮತ್ತು (ಬಿ) ಪ್ರಶ್ನೆಗಳಿಗೆ ವಿಷಯ ಪರ್ಯಾಲೋಚನೆಯಲ್ಲಿರುತ್ತೆಂದು ತಿಳಿಸೋಣವಾಗಿದೆ. ಆದ್ದರಿಂದ ತಾವು ಈ ಸಾಲಿನಲ್ಲಿ ಎಲ್ಲ ಕಡೆಯೂ ಧಾನ್ಯ ಶೇಖರಣೆ ಕ್ರಮವನ್ನು ಜಾರಿಗೆ ತರುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಬಗ್ಗೆ ನಾವಿನ್ನೂ ಯಾವ ಪಾಲಸಿಯನ್ನೂ ನಿರ್ಧರ ಮಾಡಿಲ್ಲ. ಆದು ಯಾವ ರೀತಿ ತೀರ್ಮಾನವಾಗುತ್ತದೋ ಆ ರೀತಿ ನಡೆಸಲಾಗುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಾವು 1952-53 ಕ್ಕೆ ಜಾರಿಗೆ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—1952-53ಕ್ಕೆ ಯಾವ ರೀತಿ ನಿಬಂಧನೆಗಳನ್ನು ಮಾಡಬೇಕೆಂದು ತೀರ್ಮಾನವಾಗುತ್ತೋ ಆ ಪ್ರಕಾರ ಅದನ್ನು ಜಾರಿಗೆ ತರಲಾಗುತ್ತೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—(ಸಿ) ಪ್ರಶ್ನೆಗೆ 'ಸಾಧ್ಯವಿಲ್ಲ' ಎಂದು ತಿಳಿಸಿದ್ದೀರಿ. ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಒಂದಲ್ಲ ಒಂದು ರೀತಿಯಲ್ಲಿ ಈಗಿರತಕ್ಕ ನೀತಿ ಇದ್ದೇಇರುತ್ತದೆಂದು ಇದರ ಅರ್ಥ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಆಹಾರ ಧಾನ್ಯಗಳ ಪೈಕಿ ಕೆಲವು ಎಂದರೆ—ಜೋಳ, ರಾಗಿ, ಭತ್ತ ಇತ್ಯಾದಿ ಬೆಳೆಗಳಿಗೆ—ಸುಗ್ಗಿಯಕಾಲ ಮುಗಿದು ಹೋಗಿರುತ್ತೆಂಬ ಅಂಶ ತಮ್ಮಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗಿದು. ಕೆಲವು ಬೆಳೆಗಳ ಸುಗ್ಗಿಯಕಾಲ ಮುಗಿದುಹೋಗಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗೆ ಮುಗಿದಿರುವಕಾರಣ ವಸೂಲಿ ಸಾಧ್ಯವಿಲ್ಲವೆಂಬುದನ್ನು ತಾವು ಒಪ್ಪಿಕೊಳ್ಳುವಿರಾ?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನೂ ಕೆಲವು ಧಾನ್ಯಗಳಿಗೆ ಅವಕಾಶವಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಅಭಾವ ಪ್ರದೇಶಗಳಲ್ಲಾದರೂ ಈ ವಸೂಲಿ ಕ್ರಮವನ್ನು ನಿಲ್ಲಿಸಲಾಗುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—As a matter of fact this is an un-precedented year of distress.....ಈ ಅಂಶಗಳನ್ನೆಲ್ಲಾ ಆಲೋಚನೆ ಮಾಡಿಕೊಂಡೇ ಮಾಡಲಾಗುತ್ತೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಾಗಾದರೆ ಆಹಾರ ಅಭಾವ ಇರುವಕಡೆ ಇದನ್ನು ಜಾರಿಗೆ ಕೊಡದಂತೆ ಮಾಡುತ್ತೀರಾ ?